**<u>ದಿನಾಂಕಃ 17.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ವಾದಿ ಪರ ಶ್ರೀ. ಎಂ.ಟಿ.ಎಸ್. ವಕೀಲರಿಂದಃ</u>**

1) ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ಪ್ರಸ್ತುತ ಬೆಂಗಳೂರಿನಲ್ಲಿ ವಾಸವಿರುತ್ತೇನೆ. ಈ ದಾವೆಯನ್ನು ವಿಭಾಗ ಕೋರಿ ಹೂಡಿರುತ್ತಾರೆ. ಈ ಪ್ರಕರಣದ ಸಂಪೂರ್ಣ ವಿಚಾರ ನನಗೆ ತಿಳಿದಿದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಆಂಗ್ಲ ಭಾಷೆಯಲ್ಲಿ ಸಲ್ಲಿಸಲಾಗಿದೆ. 1ನೇ ವಾದಿ ನನ್ನ ಅಣ್ಣನ ಮಗ. 2ನೇ ವಾದಿ ನನ್ನ ಅತ್ತಿಗೆ. 1ನೇ ಪ್ರತಿವಾದಿ ನನ್ನ ಅಣ್ಣ. 7ನೇ ಪ್ರತಿವಾದಿಯು 1ನೇ ಪ್ರತಿವಾದಿಯ 2ನೇ ಹೆಂಡತಿ. 8ನೇ ಪ್ರತಿವಾದಿಯು 2ನೇ ಪ್ರತಿವಾದಿಯ ಮಗಳು.

2) ದಾವಾ ಸ್ವತ್ತುಗಳು ನಮ್ಮ ತಾತನ ಮೂಲಕ ನನ್ನ ತಂದೆಗೆ ಬಂದಿತ್ತು. ದಾವಾ ಐಟಂ ನಂ.1 ಮತ್ತು 2 ರ ಸ್ವತ್ತುಗಳು ಮೊದಲಿನಿಂದಲೂ ಹಾಗೂ ಈ ದಾವೆ ಹೂಡುವ ಸಮಯದಲ್ಲಿಯೂ ನನ್ನ ತಂದೆ ಗದ್ದೇಗೌಡರ ಹೆಸರಿನಲ್ಲಿ ಇತ್ತು ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಪಂಚಾಯತ್ ಪಾರಿಕತ್ ಮೂಲಕ ವಿಭಾಗವನ್ನು ಮಾಡಿರುತ್ತಾರೆ. ಸದರಿ ಪಂಚಾಯತ್ ಪಾರಿಕತ್ ನ ಮೂಲ ಪತ್ರವು 1ನೇ ಪ್ರತಿವಾದಿಯ ಬಳಿ ಇರುತ್ತದೆ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ಹೇಳಿದಂತೆ ಯಾವುದೇ ರೀತಿ ಪಂಚಾಯತ್ ಪಾರಿಕತ್ ಆಗಿರುವುದಿಲ್ಲ ಮತ್ತು ಅಂತಹ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

3) ನನ್ನ ತಂದೆ ಗದ್ದೇಗೌಡರಿಗೆ ನಾವು 5 ಜನ ಗಂಡು ಮಕ್ಕಳು ಮತ್ತು ಒಬ್ಬರು ಹೆಣ್ಣು ಮಗಳು. ನಾನು ಮೊದಲಿನಿಂದಲೂ ಬೆಂಗಳೂರಿನಲ್ಲಿ ವಾಸವಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರರು ಎಲ್ಲರೂ ಅನ್ಯೋನ್ಯವಾಗಿ ಇರುತ್ತೇವೆ ಎಂದರೆ

ಸರಿಯಲ್ಲ. 1ನೇ ಪ್ರತಿವಾದಿಯು ಮಂಕುಂದ ಗ್ರಾಮದಲ್ಲಿ ಆತ ಒಬ್ಬನೇ ವಾಸವಿರುತ್ತಾರೆ. 1ನೇ ಪ್ರತಿವಾದಿಯು ಸದರಿ ಗ್ರಾಮದಲ್ಲಿ ತನ್ನ 2ನೇ ಹೆಂಡತಿ ಮತ್ತು ಮಗಳ ಜೊತೆ ವಾಸವಿರುತ್ತಾರೆ ಎಂದರೆ ಸರಿ. 1ನೇ ಪ್ರತಿವಾದಿ ಮತ್ತು 2ನೇ ವಾದಿಯ ನಡುವೆ ವೈವಾಹಿಕ ಜೀವನದಲ್ಲಿ ಅನ್ಯೋನ್ಯತೆ ಇರದ ಕಾರಣ ಅವರ ನಡುವೆ ನ್ಯಾಯಾಲಯದಲ್ಲಿ ಸಾಕಷ್ಟು ಪ್ರಕರಣಗಳು ನಡೆದು 1ನೇ ಪ್ರತಿವಾದಿಯು 2ನೇ ವಾದಿಗೆ ಜೀವನಾಂಶ ನೀಡುವಂತೆ ನ್ಯಾಯಾಲಯದಿಂದ ಆದೇಶ ಆಗಿದೆ ಎಂದರೆ ಸರಿ. ಜೀವನಾಂಶ ನೀಡುವಂತೆ ಹೊರಡಿಸಿದ ಆದೇಶದ ಮೇಲೆ ಸಲ್ಲಿಸಿದ ಮೇಲ್ಮನವಿಯೂ ವಜಾ ಆಗಿದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಮತ್ತು 2ನೇ ವಾದಿಯ ನಡುವೆ ಕಾನೂನು ಬದ್ಧವಾಗಿ ವಿಚ್ಛೇದನ ಆಗಿಲ್ಲ ಎಂದರೆ ಸರಿ.

4) 1ನೇ ಪ್ರತಿವಾದಿ ಮತ್ತು 2ನೇ ವಾದಿಯ ದಾಂಪತ್ಯ ಜೀವನದ ಫಲವಾಗಿ ಇಬ್ಬರು ಮಕ್ಕಳು ಜನಿಸಿದ್ದರು ಎಂದರೆ ಸರಿ. ಆ ಇಬ್ಬರು ಮಕ್ಕಳ ಪೈಕಿ ಒಬ್ಬ ಮಗ ಮೃತ ಪಟ್ಟಿರುತ್ತಾನೆ. 2ನೇ ವಾದಿ ಮತ್ತು ಗದ್ದೇಗೌಡರ ಮಕ್ಕಳ ನಡುವೆ ಮೊದಲಿನಿಂದಲೂ ಜಗಳ ನಡೆಯುತ್ತಿತ್ತು ಎಂದರೆ ಸರಿಯಲ್ಲ. ಆದ ಕಾರಣ 2ನೇ ವಾದಿ ಮತ್ತು ಆಕೆಯ ಮಕ್ಕಳಿಗೆ ಯಾವುದೇ ಭಾಗಾಂಶ ನೀಡುವುದಿಲ್ಲ ಎಂದು ನಾವುಗಳು ಹೇಳಿದ್ದೆವು ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ನಾನು ಮತ್ತು ನನ್ನ ಕುಟುಂಬದವರು ಕೂಡಿ 2ನೇ ವಿವಾಹವನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ.

5) ದಾವಾ ಐಟಂ ನಂ. 15 ಸರ್ವೆ ನಂ. 323/1 ರ ಸ್ವತ್ತಿನ ಖಾತೆಯು 1ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. 1ನೇ ಪ್ರತಿವಾದಿಯು ತನ್ನ ಮಗಳ ಮದುವೆಗಾಗಿ ನಮ್ಮ ಬಳಿ ಹಣವನ್ನು ಪಡೆದುಕೊಂಡು ದಾವಾ ಐಟಂ ನಂ. 15 ರ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯ ಕರಾರು ಪತ್ರ ಬರೆದು ಕೊಟ್ಟಿದ್ದು, ತದನಂತರ ಸದರಿ ಪತ್ರದ ಮೇರೆಗೆ ಹಿರಿಯ ಸಿವಿಲ್ ನ್ಯಾಯಾಲಯ, ಚನ್ನಪಟ್ಟಣದಲ್ಲಿ ಅಸಲು ದಾವಾ ಸಂಖ್ಯೆ 98/2019 ರಂತೆ ಪ್ರಕರಣವನ್ನು ನಾನು 1ನೇ ಪ್ರತಿವಾದಿಯ ವಿರುದ್ಧ ದಾಖಲಿಸಿರುತ್ತೇನೆ. ಸದರಿ ಕ್ರಯ ಕರಾರು ಪತ್ರವನ್ನು 1ನೇ ಪ್ರತಿವಾದಿ ಹಾಗೂ ಆತನ 2ನೇ ಹೆಂಡತಿ ಮತ್ತು ಮಗಳು ಬರೆದು ಕೊಟ್ಟಿದ್ದರು. ಸದರಿ ಕ್ರಯ ಕರಾರು ಪತ್ರಕ್ಕೆ ವಾದಿಗಳ ಸಹಿಯನ್ನು ಪಡೆದುಕೊಂಡಿರುವುದಿಲ್ಲ.

6) ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ಪಂಚಾಯತ್ ಪಾರಿಕತ್ ಆಗದೇ ಇದ್ದರೂ ಸಹ ವಾದಿಗಳಿಗೆ ಆಸ್ತಿಯಲ್ಲಿ ಭಾಗಾಂಶ ನೀಡಬೇಕಾಗುತ್ತದೆ ಎಂಬ ಕಾರಣಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಹೆಚ್ಚು ಬೆಲೆ ಬಾಳುವ ಕಾರಣ ಅವುಗಳಲ್ಲಿ ವಾದಿಯರಿಗೆ ಭಾಗಾಂಶ ನೀಡಬೇಕಾಗುತ್ತದೆ ಎಂಬ ಕಾರಣಕ್ಕಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಾನು ಹೇಳಿದಂತೆ ನಮ್ಮ ಕುಟುಂಬದಲ್ಲಿ ಯಾವುದೇ ರೀತಿ ವಿಭಾಗ ಆಗಿರುವುದಿಲ್ಲ ಮತ್ತು ದಾವಾ ಸ್ವತ್ತುಗಳ ಖಾತೆಗಳು ಈಗಲೂ ಸಹ ಕುಟುಂಬದ ಹಿರಿಯರ ಹೆಸರಿನಲ್ಲಿ ಬರುತ್ತಿವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಪೈಕಿ ಕೆಲವು ಸ್ವತ್ತುಗಳಿಗೆ ಖಾತೆಗಳನ್ನು ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**